ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1525
2	ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ
3	ಉತ್ತರಿಸುವ ದಿನಾಂಕ	:	19-03-2020
4	ಉತ್ತರಿಸುವವರು	:	ಮುಖ್ಯಮಂತ್ರಿ

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಕಳೆದ ಮೂರು ವರ್ಷಗಳಿಂದ ಕಡಿಯಲಾದ ಮರಗಳ ಸಂಖ್ಯೆ ಎಷ್ಟು;</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ಅಗಲೀಕರಣ, ಚರಂಡಿಗಳ ನಿರ್ಮಾಣ / ದುರಸ್ಥಿ, ಮೇಲ್ಸೇತುವೆ, ಕೆಳಸೇತುವೆ ಹಾಗೂ ಬೆಂಗಳೂರು ಮೆಟ್ರೋ ಯೋಜನೆ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ತೆರವುಗೊಳಿಸಲಾದ ಮರಗಳ ವಿವರಗಳು ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ವರ್ಷ</th><th>ಮರಗಳ ಸಂಖ್ಯೆ</th></tr>
<tr><td>1.</td><td>2017-18</td><td>181</td></tr>
<tr><td>2.</td><td>2018-19</td><td>255</td></tr>
<tr><td>3.</td><td>2019-20</td><td>139</td></tr>
<tr><td colspan="2">ಒಟ್ಟು</td><td>575</td></tr>
</table></td></tr>
<tr><td>ಆ)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ನೆಟ್ಟ ಸಸಿಗಳ ಸಂಖ್ಯೆ ಎಷ್ಟು;</td><td>ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೆಡಲಾದ ಸಸಿಗಳ ವಿವರ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ವರ್ಷ</th><th>ಸಸಿಗಳ ಸಂಖ್ಯೆ</th></tr>
<tr><td>1.</td><td>2017-18</td><td>100000</td></tr>
<tr><td>2.</td><td>2018-19</td><td>ಸಸಿ ನೆಡುವ ಕಾರ್ಯ ಕೈಗೊಂಡಿರುವುದಿಲ್ಲ.</td></tr>
<tr><td>3.</td><td>2019-20</td><td>75000</td></tr>
<tr><td colspan="2">ಒಟ್ಟು</td><td>175000</td></tr>
</table></td></tr>
<tr><td>ಇ)</td><td>ಸಸಿ ನೆಡುವ ಯೋಜನೆಯಲ್ಲಿ ಕಳಪೆ ಕಾಮಗಾರಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಪಾಲಿಕೆ ವತಿಯಿಂದ ಸಸಿ ನೆಡುವ ಯೋಜನೆಯಲ್ಲಿ ಯಾವುದೇ ಕಳಪೆ ಕಾಮಗಾರಿ ನಡೆದಿರುವ ಬಗ್ಗೆ ವರದಿಯಾಗಿರುವುದಿಲ್ಲ.</td></tr>
<tr><td>ಈ)</td><td>ಹಾಗಾದಲ್ಲಿ, ಈ ಸಂಬಂಧ ತೆಗೆದುಕೊಂಡ ಕ್ರಮಗಳೇನು;</td></tr>
</table>

. . . 2.

<table>
<tr><td>ಉ)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರಡಿ ನಾಗರೀಕರಿಗೆ ಸ್ವಂತ ನಿವೇಶನದಲ್ಲಿ ಸ್ವಾಭಾವಿಕವಾಗಿ ಬೆಳೆದ ಮರ ಹಾಗೂ ಕೊಂಬೆ ಕಡಿಯಲು ಅಧಿಕಾರಿಗಳು ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರಡಿಯಲ್ಲಿ ಕೆಲವೊಂದು ನಿಯಮಾವಳಿಗಳನ್ನು ಸರ್ಕಾರವು ರೂಪಿಸಿದೆ. ಆ ನಿಯಮಾವಳಿಗಳಡಿಯಲ್ಲಿ ಬಿಬಿಎಂಪಿ ವತಿಯಿಂದ ಈವರೆಗೆ ನಿಯಮಾನುಸಾರ ಅನುಮತಿಯನ್ನು ನೀಡಲಾಗುತಿತ್ತು. ಆದರೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ: ಬಿಎಸ್/ಕೆಪಿಟಿ/ಸಿಆರ್-60/14-15 ದಿನಾಂಕ: 20-2-2020ರ ಆದೇಶದನ್ವಯ ಸ್ವಂತ ಜಮೀನಿನಲ್ಲಿರುವ ಮರಗಳ ತೆರವಿನ ಆದೇಶದವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ ರವರನ್ನು ವೃಕ್ಷಾಧಿಕಾರಿಗಳಾಗಿ ನೇಮಿಸಿದ್ದು, ಈ ಹೊಣೆಯನ್ನು ಇನ್ನು ಮುಂದೆ ಅವರೇ ನಿರ್ವಹಿಸುತ್ತಾರೆ.</td></tr>
<tr><td>ಊ)</td><td>ಹಾಗಾದಲ್ಲಿ ಇದನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳಾವುವು?</td></tr>
</table>

ಸಂಖ್ಯೆ: ನಅಇ 91 ಎಂಎನ್‌ಜ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ